# ಮನದ ವಿರಕ್ತಿ



■ ಕಲ್ಲೇಶ್ ಕುಂಬಾರ್

'ಅಯ್ಯೋ, ಶಿವನೆ...! ಈ ಜಲುಮದಾಗ ನನ್ನ ಬಂದಂಥ ಕೆಟ್ಟ ಪರಿಸ್ಥಿತಿ ಈ ಭೂಮಿ ಮ್ಯಾಲೆ ಯಾರಿಗೂ ಬರಬಾರದಪ್ಪೊ ತಂದೆ...'

ಕಲ್ಲವ್ವ ಒಂದೇ ಉಸುರಿನಲ್ಲಿ ಕಣ್ಣಿಗೆ ನೀರು ತಂದುಕೊಂಡು ಅಂದುಕೊಳ್ಳುತ್ತ ಗೋಡೆಗಾಣಿಸಿ ಕುಂತು ನಿಟ್ಟುಸುರು ಬಿಟ್ಟಳು. ಆ ಕ್ಷಣದಲ್ಲಿ ಆ ನಿಟ್ಟುಸುರು ಅಲೆಅಲೆಯಾಗಿ ತೇಲಿ ಬಂದು ನನ್ನ ಕಿವಿಗೆ ತಾಕಲು ಬೆಚ್ಚಿಬಿದ್ದೆ. ಮನೆಯೊಳಗೆ ತುಂಬುಕೊಂಡಿದ್ದ ನೀರವ ಮೌನವನ್ನೆಲ್ಲ ಕುಡುದವರಂಗೆ ಪಡಸಾಲೆಯೊಳಗಿನ ನಡುಗಂಬಕ್ಕೆ ಆನಿಸಿ ನೆಲದ ಮೇಲೆ ಇಟ್ಟಿದ್ದ ದೀಪ ಆಕೆಯನ್ನು ಸಮಾಧಾನ ಪಡಿಸಲೆಂಬಂತೆ ಹೊಯ್ದಾಡುತ್ತ ತಣ್ಣಗೆ ಉರಿಯುತ್ತಿತ್ತು. ಆ ದೀಪದ ಬೆಳಕಲ್ಲಿ ತುಂಬಿ ಬಂದ ಕಣ್ಣೀರನ್ನು ಕೆನ್ನೆ ಮೇಲೆ ಸರಿಸುತ್ತ, ಈ ಲೋಕದೊಂದಿಗಿನ ತಂತುಗಳನ್ನು ಕಡಿದುಕೊಂಡವರಂಗೆ ಕುಂತಿದ್ದ ಆಕೆಯ ಮಾರಿ ನೋಡಿ ನನಗೆ ಕೆಡಕೆನಿಸಿತು. ಎಲ್ಲವೂ ಇದ್ದು ಏನೂ ಇಲ್ಲದ ಪರದೇಶಿಯಂತಾಗಿದ್ದ ಕಲ್ಲವ್ವನ ಈಗಿನ ದಯನೀಯ ಸ್ಥಿತಿಯನ್ನು ಕಂಡು ಮರುಗಿದೆ. ಆ ಹೊತ್ತಲ್ಲಿ ಆಕೆ ಇದುವರೆಗೂ ಅನುಭವಿಸಿ ಬಂದ ಬದುಕಿನಲ್ಲಿ ಉಂಡಿರಬಹುದಾದ ನೋವು, ಸಂಕಟ ಮತ್ತು ಹತಾಶೆಗಳೆಲ್ಲ ಆಕೆಯ ಮಾರಿಯ ಮೇಲೆ ಹೊಂಡದಲ್ಲಿನ ಮಲೀನ ನೀರಿನಂಗೆ ಮಡುಗಟ್ಟಿದ್ದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಗಂಡ ಹುಚ್ಚಪ್ಪ ಸತ್ತ ನಂತರ ನನ್ನವರು ತನ್ನವರು, ನನ್ನದು ತನ್ನದು ಎನ್ನುವ ಎಲ್ಲವನ್ನೂ ಗಂಡನ ಮನೆಯಲ್ಲಿಯೇ ಬಿಟ್ಟು ಬಂದು ಹೀಗೆ ಒಬ್ಬಳೇ ಹಾರೀಗೇರಿಯಲ್ಲಿ ಅನಾಥಳಂತೆ ಬದುಕುತ್ತಿದ್ದ ಕಲ್ಲವ್ವ ಇನ್ನೂ ಜೀವದಿಂದ ಇರುವಳೋ ಇಲ್ಲ ಸತ್ತೇ ಹೋಗಿರುವಳೋ ಎಂದು ವಿಚಾರಿಸಲು ಸಹ ಆಕೆಯ ರಕ್ತ ಸಂಬಂಧಿಗಳು ಎಂದು ಹೇಳಿಕೊಳ್ಳುವ ಯಾರೊಬ್ಬರೂ ಬಂದಿರಲಿಲ್ಲ. ಆಕೆಗೆ ಬೇಕಾದವರು ಅಲ್ಲಿ ಯಾರೂ ಇರಲಿಲ್ಲ! ಇದು ಕಲ್ಲವ್ವನಿಗೆ ಇನ್ನಿಲ್ಲದ ಗಾಸಿಯನ್ನುಂಟು ಮಾಡಿತ್ತು. ಗಂಡನ ಮನೆಯಲ್ಲಿ ಕಣ್ಣೀರಲ್ಲೇ ಕೈತೊಳೆಯುತ್ತ ಕಳೆದ ಆ ದಿನಗಳ ನೆನಪಲ್ಲೇ ಅದ್ಹೇಗೋ ತಿಂಗಳಿಗೊಮ್ಮೆ ಬರುತ್ತಿದ್ದ ವಿಧವಾ ವೇತನ ಮತ್ತು ಪಡಿತರ ಚೀಟಿಯ ಮೇಲೆ ದೊರಕುತ್ತಿದ್ದ ಆಹಾರ ಧಾನ್ಯದಿಂದ ಹೊಟ್ಟೆ ಬಟ್ಟೆಗೆ ಸರಿದೂಗಿಸಿಕೊಂಡು ಸಾಯದೇ ಇನ್ನೂ ಬದುಕಿದ್ದಾಳೆ ಎಂಬುದು, ಗಂಡನ ಮನೆಯಲ್ಲಿ ತನ್ನ ಪಾಲಿಗಿದ್ದ ಎರಡೆಕರೆ ಒಡಕಿ ಮ್ಯಾಲಿನ ಜಮೀನಿನಲ್ಲಿದ್ದ ಮಣ್ಣಿನ ಕಣಕಣಕ್ಕೂ ಗೊತ್ತಿತ್ತು! ಆಕೆ, ಆ ಜಮೀನಿಗಾಗಿ ಜೀವವನ್ನೇ ತೇದಿದ್ದಳು.

ಹುಚ್ಚಪ್ಪನನ್ನು ಮದಿವಿಯಾಗಿ ಕಲ್ಲವ್ವ ಬಂದ ಹೊಸದರಲ್ಲಿ ಊರಾಚೆಯಿದ್ದ ಹುಚ್ಚಪ್ಪನ ಹೆಸರಿಗಿದ್ದ ಎರಡೆಕರೆ ಒಡಕಿ ಮ್ಯಾಲಿನ ಜಮೀನಿನ ತುಂಬ ಬರೀ ಚೆಂಡಿನಾಕಾರದ ಗುಂಡು ಗುಂಡು ಕಲ್ಲುಗಳೇ ತುಂಬಿಕೊಂಡಿದ್ದವು. ಆ ಜಮೀನಿನಲ್ಲಿ ಆಗ ಕಾಳುಕಡಿ ಒತ್ತಟ್ಟಿಗಿರಲಿ, ಹುಲ್ಲು ಕಡ್ಡಿ ಸಹ ಬೆಳೆಯುತ್ತಿರಲಿಲ್ಲ. ಕೇವಲ ಮಳೆಯ ಮೇಲೆ ಬೆಳೆಯನ್ನು ತೆಗೆಯುತ್ತಿದ್ದ ಆ ಕಾಲದಲ್ಲಿ ಕಲ್ಲವ್ವನೇ ವರ್ಷಗಟ್ಟಲೆ ಒಡಕಿ ಮಾಲಿದ್ದ ವಿಶಾಲವಾದ ಬಯಲೊಳಗೆ ತುಂಬುಕೊಂಡಿದ್ದ ಗುಂಡು ಕಲ್ಲುಗಳನ್ನು ದಿನವೂ ಆರಿಸಿ ತೆಗೆದು, ಆ ಜಮೀನಿನ ನಾಕೂ ದಂಡೆಗೆ ಒಡ್ಡು ಕಟ್ಟಿದವರಂಗೆ ತಂದು ಹಾಕುವುದರ ಮೂಲಕ, ಅದಕ್ಕೆ ಬೆಳೆ ತೆಗೆಯಬಲ್ಲ ಜಮೀನಿನ ಆಕಾರ ತಂದುಕೊಟ್ಟಿದ್ದಳು. ದಿನವೂ ಜಮೀನಿನಲ್ಲಿ ಕಲ್ಲು ಆರಿಸಿದರ ಫಲವಾಗಿ ಆಕೆಯ ಎರಡೂ ಕೈ ಬೆರಳುಗಳು ಕುಷ್ಠರೋಗ ತಾಗಿದವರಂಗೆ ಮೊಂಡಾಗಿ ಹೋಗಿದ್ದವು! ಇದೆಲ್ಲ ಹುಚ್ಚಪ್ಪನಿಗೆ ತಿಳಿಯಲಾರದ ವಿಷಯವೇನೂ ಆಗಿರಲಿಲ್ಲ. ಮಹಾ ಲಜ್ಜೆಗೇಡಿಯಂತಿದ್ದ ಆತನಿಗೆ ತನ್ನ ಹೆಂಡತಿಯ ಕೈ ಬೆರಳುಗಳು ಮೊಂಡಾಗಿ ಹೋದ ಬಗ್ಗೆ ಎಳ್ಳಷ್ಟೂ ಕನಿಕರವಿರಲಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಆತ ರಾತ್ರಿ ಹಾಸುಗೆಯಲ್ಲಿ ಕಲ್ಲವ್ವನ ಪಕ್ಕದಲ್ಲಿ ಮಲಗುವುದಕ್ಕೂ ಹಿಂಜರಿಯುತ್ತಿದ್ದ. ಹಾಗೆ ಹುಚ್ಚಪ್ಪ ಹಿಂಜರಿಯುವುದಕ್ಕೆ ಬೇರೆಯದೇ ಕಾರಣವಿತ್ತಾದರೂ ಇದಾವುದರ ಅರಿವು ಇಲ್ಲದ ಕಲ್ಲವ್ವ ಮಾತ್ರ ಹಗಲು ಹನ್ನೆರೆಡು ತಾಸು ಜಮೀನಿನಲ್ಲಿ ಕಲ್ಲು ಆರಿಸುವುದನ್ನೇ ತನ್ನ ಬದುಕಾಗಿಸಿಕೊಂಡಿದ್ದಳು. ಇದೇ ಆಕೆಗೆ ಈಗ ಮಗ್ಗುಲ ಮುಳ್ಳಾಗಿ ಚುಚ್ಚಲು ಪ್ರಾರಂಭಿಸಿತ್ತು! ಒಂದು ರೀತಿಯಲ್ಲಿ ಆ ನೋವಿಗೆ ಮುಕ್ತಿಯೇ ಇಲ್ಲವೇನೋ ಎಂಬಂತಾಗಿತ್ತು.

ಎಂದೆಂದಿಗೂ ಬದಲಾಗದಂತಿದ್ದ ಹೀನಾಯ ಬದುಕನ್ನು ಆ ಮನೆಯೊಳಗೆ ಏಕಾಂಗಿಯಾಗಿ